**<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.</u>**

**<u>ಸಿ.ಸಿ. ನಂಃ139/2018</u> ಪಿ.ಡಬ್ಲ್ಯೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **09.06.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟಿ ಸವಾಲುಃ** ಆರೋಪಿ ಪರ **ಬಿ.ಎಸ್** ವಕೀಲರಿಂದಃ

ನಾನು 7 ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನಾನು ಇಂಡಿಯನ್ ಓವರಸೀಸ್ ಬ್ಯಾಂಕಿನಲ್ಲಿ ಖಾತೆ ಹೊಂದಿರುತ್ತೇನೆ. ಆರೋಪಿಯು ನನ್ನ ಗಂಡನಿಗೆ ಪರಿಚಯ ಇದ್ದು, ಸದರಿಯವರು ಆಗಾಗ ನಮ್ಮ ಮನೆಗೆ ಬರುವುದು ಹೋಗುವುದು ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ಗಂಡ ರೂ.50 ಸಾವಿರ ಹಾಗೂ ರೂ.1 ಲಕ್ಷ ಮೊತ್ತದ ಚೀಟಿ ವ್ಯವಹಾರ ಮಾಡುತ್ತಾರೆ ಎಂದರೆ ಸರಿ. ಆರೋಪಿಯು ಸದರಿ ಚೀಟಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಚೀಟಿ ವ್ಯವಹಾರ ಮಾಡುವ ದಿನ ನಮಗೆ ಬರುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿಯು ನನ್ನ ಗಂಡನ ಬಳಿ ರೂ.1 ಲಕ್ಷ ಮೊತ್ತದ 2 ಚೀಟಿಗಳನ್ನು ಹಾಕಿದ್ದರು ಎಂದರೆ ಸರಿಯಲ್ಲ. ಆರೋಪಿ ನನಗೆ ಸುಮಾರು 8 ರಿಂದ 9 ವರ್ಷಗಳಿಂದ ಪರಿಚಯ ಇರುತ್ತಾರೆ.

ನನ್ನ ಗಂಡ ವ್ಯವಸಾಯ ಮಾಡುತ್ತಾರೆ. ನನಗೆ ಇಬ್ಬರು ಮಕ್ಕಳು ಇದ್ದು, ಅವರಲ್ಲಿ ನನ್ನ ಮಗಳು ಶಿಕ್ಷಕಿಯಾಗಿರುತ್ತಾಳೆ. ನನ್ನ ಮಗಳು ಖಾಸಗಿ ಸಂಸ್ಥೆಯಲ್ಲಿ ಕೆಲಸಕ್ಕೆ ಹೋಗಿರುತ್ತಾರೆ. ನನ್ನ ಮಗಳಿಗೆ ವಿವಾಹ ಆಗಿರುತ್ತದೆ. ನಿಮ್ಮ ಆದಾಯ ಮೂಲದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ನಾವು ರೇಷ್ಮೆ ಬೆಳೆಯುತ್ತೇವೆ, ನಮಗೆ ಸೇರಿದ ಅಡಕೆ ಹಾಗೂ ತೆಂಗಿನ ತೋಟ ಇರುತ್ತದೆ ಮತ್ತು ನಾವು ಭತ್ತ ಬೆಳೆಯುತ್ತೇವೆ ಎಂದು ನುಡಿಯುತ್ತಾರೆ. ನಾವು ರೇಷ್ಮೆ ಬೆಳೆದು ಮಾರುಕಟ್ಟೆ ಸರಬರಾಜು ಮಾಡಿದ ಬಾಬ್ತು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಆದರೆ ಹಾಜರುಪಡಿಸಿರುತ್ತೇನೆ. ನಾವು ಅಡಿಕೆ, ತೆಂಗು ಹಾಗೂ ಭತ್ತ ಬೆಳೆಯುತ್ತೇವೆ ಎಂದು ತೋರಿಸಲು ದಾಖಲೆಗಳು ಇರುತ್ತೇವೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ

ಹಾಜರಪಡಿಸಲು ತೊಂದರೆ ಇರುವುದಿಲ್ಲ. ನಮ್ಮ ವಾರ್ಷಿಕ ಆದಾಯ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುವುದಿಲ್ಲ, ಸಾಕ್ಷಿ ಮುಂದುವರೆದು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಾವು ಪಡೆದ ಆದಾಯವನ್ನು ಖರ್ಚು ಮಾಡಿದ ನಂತರ ಉಳಿಕೆ ಎಷ್ಟು ಹಣ ಉಳಿದಿರುತ್ತದೆ ಎಂದು ತೋರಿಸಲು ದಾಖಲೆಯನ್ನು ಹಾಜರಪಡಿಸಿರುವುದಿಲ್ಲ, ಆದರೆ ನನ್ನ ಬಳಿ ಇರುತ್ತದೆ.

ಆರೋಪಿಯು ನನ್ನ ಬಳಿ ಗಾರ್ಮೆಂಟ್ಸ ಕಟ್ಟಿಸುತ್ತೇವೆ ಎಂದು ಹೇಳಿ ಸುಮಾರು 7-8 ವರ್ಷಗಳ ಹಿಂದೆ ನನ್ನಿಂದ ಹಣವನ್ನು ಪಡೆದುಕೊಂಡಿರುತ್ತಾರೆ. ಹಣ ನೀಡುವ ಸಮಯದಲ್ಲಿ ನಾನು, ನನ್ನ ಗಂಡ ಮತ್ತು ಆರೋಪಿ ಇದ್ದೆವು. ಆರೋಪಿಗೆ ನೀಡಿದ್ದ ಹಣ ನಾನು ಮನೆಯಲ್ಲಿ ಕೂಡಿಟ್ಟ ಹಣ ಹಾಗೂ ಬ್ಯಾಂಕಿನಿಂದ ತಂದಂತಹ ಹಣವಾಗಿರುತ್ತದೆ. ಆರೋಪಿ ಹಣ ಕೇಳಿದ 2-3 ದಿನಗಳ ನಂತರ ನಾನು ಆರೋಪಿಗೆ ಹಣವನ್ನು ನೀಡಿರುತ್ತೇನೆ. ಸಾಮಾನ್ಯವಾಗಿ ರೂ.20 ಸಾವಿರಕ್ಕಿಂತ ಹೆಚ್ಚಿನ ಹಣವನ್ನು ವ್ಯವಹರಿಸುವ ಸಮಯದಲ್ಲಿ ಚೆಕ್ ಮುಖಾಂತರ ಮಾಡಬೇಕು ಎಂಬ ನಿಯಮ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಆರೋಪಿಯು ಹಣ ಪಡೆದುಕೊಂಡ ಸಮಯದಲ್ಲಿಯೇ ನನಗೆ ಚೆಕ್ಕನ್ನು ನೀಡಿರುತ್ತಾರೆ. ಆರೋಪಿಯು ಬರವಣಿಗೆ ಮಾಡಿ ನಿಪಿ-1 ಚೆಕ್ಕನ್ನು ನೀಡಿರುತ್ತಾರೆಯೇ ಅಥವಾ ಸಹಿ ಮಾಡಿದ ಖಾಲಿ ಚೆಕ್ಕನ್ನು ನೀಡಿರುತ್ತಾರೆಯೇ ಎಂದರೆ ಸಾಕ್ಷಿಯು ಸಹಿ ಮಾಡಿದ ಖಾಲಿ ಚೆಕ್ಕನ್ನು ನನಗೆ ನೀಡಿರುತ್ತಾರೆ. ನಾನು ತೆರಿಗೆ ಪಾವತಿದಾಳನಾಗಿರುವುದಿಲ್ಲ.

ನನಗೂ ಹಾಗೂ ಆರೋಪಿಗೂ ವೈಯುಕ್ತಿಕವಾಗಿ ಯಾವುದೇ ಪರಿಚಯ ಇರುವುದಿಲ್ಲ, ಆರೋಪಿಯ ನನ್ನ ಗಂಡನಿಗೆ ಚೀಟಿ ವ್ಯವಹಾರ ಸಮಯದಲ್ಲಿ ನೀಡಿದ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಈ ಪ್ರಕರಣವನ್ನು ಆರೋಪಿಯ ವಿರುದ್ಧ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಹಣವನ್ನು ಕೊಡುತ್ತಾರೆ ಹಾಗೂ ಪ್ರಕರಣ ದಾಖಲಿಸುವುದು ಬೇಡಾ ಎಂದು ನನ್ನ ಗಂಡ ಹೇಳಿದ್ದರೂ ಸಹ ನಾನು

ಬಲವಂತವಾಗಿ ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೇಲೆ ತಿಳಿಸಿದಂತೆ ಯಾವುದೇ ಬೆಳೆಯನ್ನು ಬೆಳೆದಿರುವುದಿಲ್ಲ ಹಾಗೂ ನನಗೆ ಯಾವುದೇ ಆದಾಯ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಕಿರುಕುಳ ಕೊಡುವ ಉದ್ದೇಶದಿಂದ ನಾನು ಆತನ ವಿರುದ್ಧ ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**
**ನ್ಯಾಯಾಲಯ ತಿ.ನರಸೀಪುರ.**